ಉದಾಹರಣೆಗೆ ನೀವು ಕೇಳಿದ ಪ್ರಶ್ನೆಯಲ್ಲಿ ಮಕ್ಕಳಿಗೆ ಓದಿನ ಅಭಿರುಚಿ, ಸಾಹಿತ್ಯ ಪ್ರೀತಿ ಬೆಳೆಸಲು ಮಕ್ಕಳ ಸಾಹಿತ್ಯದ ಕೃತಿಗಳು ಸಹಾಯಕವಾಗಬಹುದು. ಇದನ್ನೆಲ್ಲಾ ಆಗುಮಾಡಲು ಮಕ್ಕಳ ಬೆಳವಣಿಗೆಯ ಕುರಿತು ಕಾಳಜಿ ಇರುವ ಸಾಹಿತ್ಯಾಸಕ್ತ ಶಿಕ್ಷಕರಿದ್ದರೆ ಸಾಕು, ಅವರು ಲೇಖಕರೇ ಆಗಿರಬೇಕೆಂದಿಲ್ಲ.

ನಾನೊಬ್ಬ ಶಿಕ್ಷಕನಾಗಿರುವುದರಿಂದ ನಾನು ಮಾಡಿದ ಒಂದಷ್ಟು ಪ್ರಯೋಗಗಳನ್ನು ಹೇಳುವುದಾದರೆ: ನನ್ನ ಶಾಲೆಯ ಮಕ್ಕಳಿಗೆ ಗ್ರಂಥಾಲಯದಲ್ಲಿ ಇದ್ದ ಬಣ್ಣಬಣ್ಣದ ಕಥಾ ಪುಸ್ತಕಗಳನ್ನು ಓದಿ, ಅಭಿನಯಿಸಿ ತೋರಿಸುತ್ತಿದ್ದೆ. ಅವರಿಗೂ ಓದುವ ಅಭ್ಯಾಸ ಮಾಡಿಸಿದೆ. ಓದಿರುವ ಪುಸ್ತಕಗಳ ಬಗ್ಗೆ 'ಒಂದು ಪುಸ್ತಕ ನಾಲ್ಕು ಮಾತು' ಎನ್ನುವ ಕಾರ್ಯಕ್ರಮ ಆಯೋಜಿಸಿದೆ. ಇದು ಅವರ ನಿರಂತರ ಓದು ಬರವಣಿಗೆಗೂ ಕಾರಣವಾಯಿತು. ಅವರ ಬರವಣಿಗೆಗಳು ಹೆಚ್ಚಾದುದರಿಂದ ಅವುಗಳನ್ನೆಲ್ಲಾ ಸೇರಿಸಿ 'ಎಳೆ ಬಿಸಿಲು' ಎನ್ನುವ ಸಂಕಲನ ಸಂಪಾದಿಸಿದೆ. ಕೆಲವರ ಪ್ರಕಟಿತ ಬರಹಗಳು ಹಲವರ ಓದು, ಬರಹಗಳಿಗೆ ಪ್ರೇರಣೆ ಒದಗಿಸಿತು. ಆಗ ಅವರಿಗೆಲ್ಲಾ ವೇದಿಕೆ ಕೊಡಲು 'ಬಳಪ' ಎನ್ನುವ ಮಕ್ಕಳ ಮಾಸ ಪತ್ರಿಕೆ ಆರಂಭಿಸಿದೆ. ಇವೆಲ್ಲಾ ಮಕ್ಕಳಲ್ಲಿ ಓದುಪ್ರೀತಿಯನ್ನು ಹುಟ್ಟಿಸಲು ಮಾಡಿದ ಕೆಲಸಗಳಷ್ಟೇ. ಇಂಥ ಕೆಲಸಗಳು ಆಶಾದಾಯಕ ಎನ್ನುವಂತೆ ಆಸಕ್ತ ಶಿಕ್ಷಕರ ನಡುವೆ ಅಲ್ಲಲ್ಲಿ ನಡೆದಿವೆ. ಆದರೆ, ಇದನ್ನೇ ಮಕ್ಕಳ ಸಾಹಿತ್ಯದ ವ್ಯಾಪ್ತಿಗೆ ತರುವುದಾಗಬಾರದು ಅಷ್ಟೇ.

- **ಇದುವರೆಗೆ ಬಂದ ಪರಂಪರೆಯ ಮಕ್ಕಳ ಸಾಹಿತ್ಯದೊಂದಿಗೆ ವರ್ತಮಾನದ ಮಕ್ಕಳ ಸಾಹಿತ್ಯವನ್ನು ಹೇಗೆ ಗುರುತಿಸುವಿರಿ?**

ಮಕ್ಕಳ ಸಾಹಿತ್ಯ ಆರಂಭದಲ್ಲಿ ಶಾಲಾ ಶಿಕ್ಷಣದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿತು. ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಪುರಾಣ, ಜನಪದ, ಇತಿಹಾಸ, ಪಂಚತಂತ್ರದ ಕಥೆಗಳನ್ನು, ಅಲ್ಲಿನ ಮೌಲ್ಯಗಳನ್ನು ಪಠ್ಯದಲ್ಲಿ ಅಳವಡಿಸಲಾಯಿತು. ಮುಂದೆ ಬಂದ ಶಿಕ್ಷಕರನೇಕರು ತಾವು ಸಾಹಿತ್ಯ ರಚನೆ ಮಾಡುವ ಸಂದರ್ಭದಲ್ಲಿ ಮಕ್ಕಳ ಬೆಳವಣಿಗೆಗೆ ಪೂರಕವಾದ ಮೌಲ್ಯಗಳನ್ನು ಬರಹಗಳಲ್ಲಿ ತಂದು, ಅದನ್ನೆಲ್ಲ ಮಕ್ಕಳ ಸಾಹಿತ್ಯವೆಂದರು. ಆದರೆ ಸಾಹಿತ್ಯ ಯಾವತ್ತೂ ಎದುರಿಗೆ ಇರುವವರನ್ನು ಉದ್ದೇಶವಾಗಿಟ್ಟುಕೊಂಡು ರಚಿತಗೊಂಡರೆ ಕೃತಕವೆನಿಸಿಕೊಳ್ಳುತ್ತದೆ. ಅದು ಬರಹಗಾರನ ಅಂತರ್ಯದ ತುಡಿತದ ಹೊರಹಾಕುವಿಕೆ ಆಗಿರುತ್ತದೆಯಷ್ಟೇ ಹೊರತು, ಅದಕ್ಕೆ ಯಾರ ಅಂಕಿತದ ಹಂಗಿರುವುದಿಲ್ಲ.

ಮಕ್ಕಳ ಸಾಹಿತ್ಯ ವರ್ತಮಾನದಲ್ಲಿ ಈ ಮೇಲೆ ತಿಳಿಸಿದ ಪರಂಪರೆಯ ಧಾರೆಗಳನ್ನು ದಾಟಿ ಮುಂದೆ ಬಂದಿದೆ. ಮಕ್ಕಳ ಸಾಹಿತಿಗಳು ತಮ್ಮೊಳಗಿನ ಬಾಲ್ಯದ ಹುಡುಕಾಟವನ್ನು ಮಾಡುವ, ತಮ್ಮ ನೆಲದ ನಲಿವು, ಸಂಕಟಗಳನ್ನು ಅಭಿವ್ಯಕ್ತಿಸುವ ಪ್ರಯತ್ನ ಮಾಡುತ್ತಿದ್ದಾರೆ. ವಾಸ್ತವದ ಎಚ್ಚರದೊಂದಿಗೆ, ಅತಿವಾಸ್ತವ ಜಗತ್ತನ್ನೂ ತೆರೆದಿಡುತ್ತಿದ್ದಾರೆ. ಆ ಮೂಲಕ ಫ್ಯಾಂಟಸಿ ರೂಪವನ್ನು ಹೆಚ್ಚಾಗಿ ಪ್ರಯೋಗಿಸುತ್ತಿದ್ದಾರೆ. ಇತ್ತೀಚೆಗೆ ಬಂದ ಬರಹಗಳು ಅವರೊಳಗಿನ ತೀವ್ರ ತುಡಿತದ ಭಾಗವಾಗಿಯೇ ಬಂದಿವೆ. ತಮ್ಮಣ್ಣ ಬೀಗಾರ ಅವರು ಏನು ಬರೆದರೂ ಮಲೆನಾಡಿನ ನಿಸರ್ಗ ಸೆಳೆತದಿಂದ ಅವರಿಗೆ ಬಿಡಿಸಿಕೊಳ್ಳಲಾಗುವುದಿಲ್ಲ. ಹಾಗಾಗಿಯೇ ಅವರ 'ಬಾವಲಿಗುಹೆ' ಕಾದಂಬರಿ ಮಕ್ಕಳ ಕಥೆ ಹೇಳುತ್ತಲೇ ನೈಸರ್ಗಿಕ ಸಂಪತ್ತು ಉಳಿಸುವ ಮಾತಾಡುತ್ತದೆ. ಬಿಳಿಗೆರೆ ಕೃಷ್ಣಮೂರ್ತಿಯವರು ಯಾವಾಗಲೂ ನೀರು, ನೆಲ, ಕೃಷಿಯನ್ನೇ ಉಸಿರಾಡುತ್ತಿರುವವರು. ಹಾಗಾಗಿ ಅವರು ಕಥೆ ಬರೆದರೂ, ಕವಿತೆ ಬರೆದರೂ, ನಾಟಕ ಬರೆದರೂ ಅವರ ಮಣ್ಣ ಕಾಳಜಿ ಮತ್ತೆ ಮತ್ತೆ ಎದುರು ಬಂದು ನಿಲ್ಲುತ್ತದೆ. ಯಾವಾಗಲೂ ಅಳಿಯದ ಬಾಲ್ಯವನ್ನು ತಮ್ಮೊಳಗೆ ಇರಿಸಿಕೊಂಡ ಆನಂದ ಪಾಟೀಲರು ಈಗ್ಗೆ ಐವತ್ತು ಅರವತ್ತು ವರ್ಷಗಳ